## 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

**ಸಿ ಸಿ ನಂ. 693/2023 ಪಿಡಬ್ಲ್ಯೂ 01**

**ಸಾಕ್ಷಿಯನ್ನು ದಿನಾಂಕ 06.04.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟಿಸವಾಲು ಆರೋಪಿ ಪರ ವಕೀಲರಿಂದ ಃ**

ನನ್ನ ಪಿರ್ಯಾದಿಯಲ್ಲಿ ಆರೋಪಿ ನನಗೆ ಪರಿಚಯಸ್ಥ ಎಂದು ಹೇಳಿದ್ದು, ಯಾವ ರೀತಿಯ ಪರಿಚಯ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ನನಗೆ ವ್ಯವಹಾರಿಕವಾಗಿ ಪರಿಚಯ ಎಂದು ನುಡಿಯುತ್ತಾರೆ. ಆರೋಪಿಯು ವ್ಯವಹಾರಿಕವಾಗಿ ಯಾವ ರೀತಿಯ ಪರಿಚಯ ಎಂದರೆ, ಆರೋಪಿ ನನ್ನಿಂದ ಬಂಗಾರದ ಆಭರಣಗಳನ್ನು ಖರೀದಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆದ್ದರಿಂದ ಆರೋಪಿ ಆರ್ಥಿಕವಾಗಿ ಸಶಕ್ತರು ಎಂದರೆ ಸರಿ. ನಾನು ಮತ್ತು ಆರೋಪಿ ಸಮಾನ ವಯಸ್ಕರು ಅಲ್ಲ ಎಂದರೆ ಸರಿ. ಆರೋಪಿ ಜಿಗಳಿ ಗ್ರಾಮದಲ್ಲಿ ವಾಸವಾಗಿದ್ದು, ಸಾಕಷ್ಟು ಜಮೀನುಗಳಿವೆ ಮತ್ತು ಅವರು ವ್ಯವಸಾಯ ಮಾಡುತ್ತಾರೆ. ಆರೋಪಿಗೆ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

ಆರೋಪಿ ಕಳೆದ ಎರಡು ಮೂರು ವರ್ಷಗಳಿಂದ ವಕೀಲ ವೃತ್ತಿಯನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಆದ್ದರಿಂದ ಅವರು ದಾವಣಗೆರೆಯಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಜಿಗಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿ ಜಿಗಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದು ಸುಳ್ಳು ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಜಿಗಳಿ ಗ್ರಾಮದಲ್ಲಿ ಆರೋಪಿಯ ತಾಯಿ ಮತ್ತು ತಮ್ಮ ಮಾತ್ರ ವಾಸವಾಗಿದ್ದಾರೆ ಎಂದರೆ ಸರಿಯಲ್ಲ

ನಿಪಿ.1 ರಲ್ಲಿರುವ ಬರಣಿಗೆ ದಿನಾಂಕ ಸಂಖ್ಯೆಗಳು ಮತ್ತು ಆರೋಪಿ ಸಹಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.1 ನ್ನು ಆರೋಪಿ ತಯಾರು ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ನನ್ನ ಕೈಬರವಣಿಗೆ ಇಲ್ಲ ಎಂದರೆ ಸರಿ. ನಿಪಿ.1 ರಲ್ಲಿ ಸಹಿಯನ್ನು ಕೈಬರಹ ತಜ್ಞರ ಅಭಿಪ್ರಾಯಕ್ಕೆ ಕಳುಹಿಸಲು ತೊಂದರೆ ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಾಡಿರುವ ಸಹಿ ಹಾಗೂ ನಿಪಿ1 ರಲ್ಲಿ ಇರುವ ಬರವಣೆಗೆಗಳು ಒಂದೇ ರೀತಿ ಇದೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಬರಣಿಗೆ ಮತ್ತು ಅಂಕಿಗಳು ನನ್ನದೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಆರೋಪಿ ಸಹಿಗೂ ಮತ್ತು ಆಪಾದಾನೆಯಲ್ಲಿರುವ ಆರೋಪಿ ಸಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನಗೆ ಕನೂನು ಬದ್ಧ ಹಣದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಸಾಮಾನ್ಯವಾಗಿ 20 ಸಾವಿಕ್ಕಿಂತ ಹೆಚ್ಚಿನ ಹಣದ ವ್ಯವಹಾರವನ್ನು ಮಾಡಬೇಕಾದರೆ ಚೆಕ್ ಅಥವಾ ಆರ್ ಟಿ ಜಿ ಎಸ್ ಮುಖಾಂತರ ವ್ಯವಹಾರ ಮಾಡಬೇಕು, ನಗದು ಹಣದ ರೂಪದಲ್ಲಿ ಮಾಡಬಾರದು ಎಂದು ನನಗೆ ಜ್ಞಾನ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿ ನಗದು ರೂಪದಲ್ಲಿ ಹಣ ಬೇಕು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ.1 ನ್ನು ಬ್ಯಾಂಕ್ ಲ್ಲಿ ನಗದೀಕರಣ ಗೊಳಿಸಲು ನಿಪಿ.2 ನ್ನು ಯಾರು ಬರೆದರು ಎಂದರೆ ಸಾಕ್ಷಿಯು ಬ್ಯಾಂಕಿಗೆ ಬಂದಿರುವ ಗ್ರಾಹಕರಿಂದ ಬರೆಸಿರುತ್ತೇನೆ. ಸದರಿ ಗ್ರಾಹಕರ ಹೆಸರನ್ನು ಹೇಳಲು ಬರುವುದಿಲ್ಲ. ಆರೋಪಿ ನಿಪಿ.1 ನ್ನು ತಯಾರಿಸಿಕೊಂಡು ಬಂದಿದ್ದರು ಎಂದು ಹೇಳಿದ್ದು, ಆ ದಿನ ಅವರು ಒಬ್ಬರೆ ಬಂದಿದ್ದರು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ನನಗೆ ನಿಪಿ.1 ಚೆಕ್ ನ್ನು ಕೊಡಲು ಯಾವ ದಿನಾಂಕ, ಯಾವ ಜಾಗದಲ್ಲಿ , ಯಾರು ಯಾರು ಬಂದಿದ್ದರು ಎಂದು ನಾನು ಪಿರ್ಯಾದಿಯಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿಯಲ್ಲಿ ಆರೋಪಿಯು ಹಣ ಕೇಳಲು ಬಂದಿದ್ದನು ಎಂದು ಹೇಳಿದ್ದು, ಯಾವ ದಿನಾಂಕ ಮತ್ತು ಯಾವ ಜಾಗ ಎಂಬುದನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದಕ್ಕೂ ಮೊದಲು ನಾನು ಯಾವುದೇ ಚೆಕ್ ಪ್ರಕರಣವನ್ನು ದಾಖಲುಮಾಡಿಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ಸದರಿ ವ್ಯವಹಾರಕ್ಕೆ ನಾನು ಪರವಾನಿಗೆಯನ್ನು ಪಡೆದಿರುತ್ತೇನೆ. ಸದರಿ ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಒಂದು ವರ್ಷಕ್ಕೆ ಎಷ್ಟು ಆದಾಯ ಎಂದು ನನ್ನ ತೆರಿಗೆ ವಹಿಯಲ್ಲಿ ಘೋಷಿಸಿಕೊಂಡಿದ್ದೇನೆ. ನಾನು ನನ್ನ ವರ್ಷದ ಆಸ್ತಿ ಮತ್ತು ಹೊಣೆಗಾರಿಕೆಗಳಲ್ಲಿ ಯಾರು ಯಾರಿಗೆ ಸಾಲ ನೀಡಿದ್ದೇನೆ ಮತ್ತು ಯಾಂದ ಸಾಲವನ್ನು ಹಿಂಪಡೆಯಬೇಕು ಎನ್ನುವುದರ ಬಗ್ಗೆ ನಮೂದಿಸಿದ್ದೇನೆ ಎಂದರೆ ಸಾಕ್ಷಿಯು ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೊರಿದ್ದು, ಮಂಜೂರು ಮಾಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.